# ಕರ್ನಾಟಕ ವಿಧಾನ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 109 (78) |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಒಟ್ಟು ವಿಸ್ತೀರ್ಣದಲ್ಲಿ ಅರಣ್ಯದ ಪಾಲು ಎಷ್ಟು? ಪರಿಸರ ಸಮತೋಲನೆಗೆ ಅರ್ಹತೆಯಾಗಿ ಇರಬೇಕಾದ ಅರಣ್ಯ ಪ್ರದೇಶದ ಪ್ರಮಾಣ ಎಷ್ಟು; | ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ 2021 ರ ವರದಿಯಂತೆ ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಅರಣ್ಯ ಹೊದಿಕೆ ಶೇ 20.19 ರಷ್ಟು ಇರುತ್ತದೆ. ಪರಿಸರ ಸಮತೋಲನೆಗೆ ರಾಷ್ಟ್ರೀಯ ನೀತಿ-1988ರ ಗುರಿಯು ದೇಶದ ಒಟ್ಟು ಭೂ ಪ್ರದೇಶದ ಕನಿಷ್ಟ ಮೂರರ ಒಂದು ಭಾಗ (1/3ನೇ) ದಷ್ಟು ಅರಣ್ಯ ಹೊದಿಕೆಯನ್ನು ಇರತಕ್ಕದ್ದು ಹಾಗೂ ಬೆಟ್ಟ ಗುಡ್ಡಗಾಡ ಪ್ರದೇಶದಲ್ಲಿ ಮೂರು ಎರಡ ರಷ್ಟು ಭಾಗ (2/3ನೇ) ಇರತಕ್ಕದ್ದು. |
| ಆ | ರಾಷ್ಟ್ರೀಯ ಸರಾಸರಿಯಂತೆ ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದ ಶೇಕಡವಾರು ಅರಣ್ಯ ಎಷ್ಟು; ಕಳೆದ 5 ವರ್ಷಗಳ ಅರಣ್ಯ ಬೆಳವಣಿಗೆಯ ಮಾಹಿತಿ ನೀಡುವುದು; | ರಾಷ್ಟ್ರೀಯ ಸರಾಸರಿಯಂತೆ ಕರ್ನಾಟಕ ರಾಜ್ಯದ ಅರಣ್ಯ ಹೊದಿಕೆಯು ಶೇ 5.43 ರಷ್ಟಿರುತ್ತದೆ ಕಳೆದ 5 ವರ್ಷಗಳಲ್ಲಿ ಅರಣ್ಯದ ಬೆಳವಣಿಗೆಯ ಮಾಹಿತಿ **ಅನುಬಂಧ-1** ರಲ್ಲಿ ಸಲ್ಲಿಸಲಾಗಿದೆ. |
| ಇ | 2018 ರಿಂದ ಇಲ್ಲಿಯವರೆಗೆ ಅರಣ್ಯ ಅಭಿವೃದ್ಧಿಗಾಗಿ ಸರ್ಕಾರ ಖರ್ಚು ಮಾಡಲಾದ ಅನುದಾನ ಎಷ್ಟು; (ವರ್ಷವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | 2018 ರಿಂದ ಇಲ್ಲಿಯವರೆಗೆ ಅರಣ್ಯ ಅಭಿವೃದ್ಧಿಗಾಗಿ ಭರಿಸಿರುವ ವೆಚ್ಚದ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-2** ರಲ್ಲಿ ಸಲ್ಲಿಸಲಾಗಿದೆ. |
| ಈ | ಅರಣ್ಯ ಅಭಿವೃದ್ಧಿಗಾಗಿ ಸಾರ್ವಜನಿಕರಿಗೆ ಹಾಗೂ ರೈತರಿಗೆ ಅರಿವು ಮೂಡಿಸುವಲ್ಲಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು; ಬಯಲು ಸೀಮೆ ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಉತ್ತರ ಕರ್ನಾಟಕದ ಭಾಗದಲ್ಲಿ ಅರಣ್ಯ ಪ್ರದೇಶ ವಿಸ್ತರಣೆಗಾಗಿ ಸರ್ಕಾರ ಯಾವ ಯಾವ ಉತ್ತೇಜನಕಾರಿ ಯೋಜನೆಗಳನ್ನು ಹಮ್ಮಿಕೊಂಡಿದೆ; | ಅರಣ್ಯ ಅಭಿವೃದ್ಧಿಗಾಗಿ ಸಾರ್ವಜನಿಕರಿಗೆ ಹಾಗೂ ರೈತರಿಗೆ ಅರಿವು ಮೂಡಿಸುವ ಸಲುವಾಗಿ ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವುದು ಮತ್ತು ಕೃಷಿ ಅರಣ್ಯ ಪ್ರೋತ್ಸಾಹ ಎಂಬ ಯೋಜನೆಗಳನ್ನು ಅಭಿವೃದ್ಧಿ ಘಟಕದಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಬಯಲು ಸೀಮೆ ಪ್ರದೇಶಗಳಲ್ಲಿಯೂ ಸಹ ಅರಣ್ಯ ಹೊದಿಕೆ /ವೃಕ್ಷ ಹೊದಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಲಾಖೆಯಿಂದ ವಿವಿಧ ಅರಣ್ಯೀಕರಣ ಯೋಜನೆಗಳಾದ ಹಸಿರು ಆಯವ್ಯಯ, ಹಸಿರು ಕರ್ನಾಟಕ, ಕ್ಷೀಣಿತ ಅರಣ್ಯಗಳ ಅಭಿವೃದ್ಧಿ, ನಗರ ಪ್ರದೇಶ ಹಸರೀಕರಣ, ರಸ್ತೆಬದಿ ನೆಡುತೋಪು ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ಅರಣ್ಯೀಕರಣ ಈ ಎಲ್ಲಾ ಯೋಜನೆ/ಕಾರ್ಯಕ್ರಮಗಳಡಿ ಸಸಿಗಳನ್ನು ಬೆಳೆಸುವುದು ಮತ್ತು ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆಯನ್ನು ಈ ಘಟಕದಿಂದ ಮಾಡಲಾಗುತ್ತದೆ. |

| | | |
|---|---|---|
| ಉ | ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿರುವ ಅರಣ್ಯ ಪ್ರದೇಶವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | **ಅನುಬಂಧ-3** ರಲ್ಲಿ ಸಲ್ಲಿಸಲಾಗಿದೆ. |
| ಊ | ರಾಜ್ಯದಲ್ಲಿ ಅರಣ್ಯ ಪ್ರದೇಶ ಒತ್ತುವರಿ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಅರಣ್ಯ ಪ್ರದೇಶ ಒತ್ತುವರಿ ತಡೆಗಟ್ಟಲು ಹಾಗೂ ಸಂರಕ್ಷಿಸಲು, ಗಡಿ ರೇಖೆಯ ಸುತ್ತಲೂ ಅವಶ್ಯಕತೆಗನುಗುಣವಾಗಿ ದನ ನಿರೋಧಕ ಕಂದಕ ನಿರ್ಮಾಣ, ಕಾಂಪೌಂಡ್ ವಾಲ್ ನಿರ್ಮಾಣ, ಚೈನ್ ಲಿಂಕ್ ಮೆಶ್ ಮತ್ತು ತಂತಿ ಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ ಹಾಗೂ ಒತ್ತುವರಿ ತೆರವುಗೊಳಿಸಿದ ಪ್ರದೇಶದಲ್ಲಿ ಮರು ಅರಣ್ಯೀಕರಣ ಕೈಗೊಳ್ಳಲಾಗುತ್ತಿದೆ |

ಸಂಖ್ಯೆ: ಅಪಜೀ 83 ಎಫ್‌ಎಫ್ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.